1	2	3	4
38	KGF College of Dental Sciences, KGF	KGF	32
39	FArooqia Dental College, Mysore	Mysore	28
40	JSS Dental College & Hospital, Mysore	Mysoe	77
		Total	**196**
		Grand Total	**1917**

ಗಿರಿಜನ ಆಶ್ರಮ ವಾಸಿಗಳ ಶಿಕ್ಷಕರ ನೇಮಕ

929 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಿರಿಜನ ಆಶ್ರಮ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಯ ಬಗ್ಗೆ ಅನುಸರಿಸುವ ನಿಯಮಗಳೇನು;

ಆ) ಹುಣಸೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿರಿಜನ ಆಶ್ರಮ ಶಾಲೆಗಳೆಷ್ಟು; ಮತ್ತು ಎಲ್ಲೆಲ್ಲಿ ವಿವರ ನೀಡುವುದು;

ಇ) ಈ ಆಶ್ರಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವಿಷಯವಾರು ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಹಾಗೂ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು;

ಈ) ಬಹುತೇಕ ಶಿಕ್ಷಕರು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಕೇವಲ 2250/– ರೂ.ಗಳ ವೇತನವನ್ನು ನಿಗದಿಪಡಿಸಲಾಗಿದ್ದು, ಇದರಿಂದ ಶಿಕ್ಷಕರು ವೇತನ ಸಾಕಾಗುವುದಿಲ್ಲವೆಂದು ಕೆಲಸಕ್ಕೆ ಬಾರದಿರುವುದರಿಂದ ಮಕ್ಕಳ ಶೈಕ್ಷಣಿಕ ಪ್ರಗತಿಚೆ ಅಡಚಣೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಹಾಗಿದ್ದಲ್ಲಿ, ಇತರೆ ಶಾಲೆಗಳಲ್ಲಿ ಇರುವಂತೆ ಖಾಯಂ ಶಿಕ್ಷಕರ ನೇಮಕಕ್ಕೆ ಅಥವಾ ಹಾಲಿ ಇರುವ ವೇತನ ಹೆಚ್ಚಳಕ್ಕೆ ಅವಕಾಶ ಮಾಡಿ ಕೊಡಲಾಗುವುದೇ ಅಥವಾ ಹಾಲಿ ಕೆಲಸ ನಿರ್ವಹಿಸುತ್ತಿರುವ ಅರ್ಹ ಶಿಕ್ಷಕರನ್ನು ಖಾಯಂ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ವಿವರ ನೀಡುವುದು;

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು):

ಅ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ರಚನೆ ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಆಶ್ರಮ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಮಾಜ ಕಲ್ಯಾಣ ಮತ್ತು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇರೆಗೆ ಪಡೆದು ತುಂಬಲಾಗಿದೆ. ಉಳಿದಂತೆ ಖಾಲಿಯಿರುವ ಆಶ್ರಮ ಶಾಲಾ ಶಿಕ್ಷಕರ ಹುದ್ದೆಗಳಿಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಇಡಿಗಂಟು ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗುತ್ತಿದೆ.

ಆ) ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 5 ಗಿರಿಜನ ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಆ ಸ್ಥಳಗಳು:

1) ನಲ್ಲೂರಪಾಲ
2) ನೇರಳ ಕುಪ್ಪೆ
3) ಕೊಳವಿಗೆ
4) ನಾಗಾಪುರ
5) ವೀರನಹೊಸಹಳ್ಳಿ

ಇ)

ಆಶ್ರಮ ಶಾಲೆ ವಿವರ	ವಿದ್ಯಾರ್ಥಿಗಳ ಸಂಖ್ಯೆ	ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ	ಖಾಯಂ ಶಿಕ್ಷಕರ ಸಂಖ್ಯೆ	ದಿನಗೂಲಿ ಶಿಕ್ಷಕರ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ
ನಲ್ಲೂರ ಪಾಲ	175	7	2	1	4
ನೇರಳ ಕುಪ್ಪೆ	125	5	–	1	4
ಕೊಳವಿಗೆ	125	5	1	–	4

1	2	3	4	5	6
ನಾಗಾಪುರ	125	5	–	1	4
ವೀರನ ಹೊಸಹಳ್ಳಿ	125	5	–	–	5
ಒಟ್ಟು	**675**	**27**	**03**	**03**	**21**

ಈ) ಹೌದು

ಉ) ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ರಚನೆ ಆದ ನಂತರ ಖಾಲಿ ಇರುವ ಆಶ್ರಮ ಶಾಲಾ ಶಿಕ್ಷಕರ ಹುದ್ದೆಗಳನ್ನು ಖಾಯಂ ತಳಹದಿಯ ಮೇಲೆ ನೇಮಕ ಮಾಡಲು ಕ್ರಮವಹಿಸಲಾಗುವುದು. ಹಾಲಿ ಇಡಿಗಂಟು ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರ ಗೌರವ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇಡಿಗಂಟು ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಖಾಯಂ ಮಾಡುವ ಪ್ರಸ್ತಾವನೆ ಇರುವುದಿಲ್ಲ.

930 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಳಾಂತರ ಮಾಡಲು ಮತ್ತು ಸಮುದಾಯ ಆರೋಗ್ಯ ಕೇಂದ್ರ ಅಥವಾ ಸಾರ್ವಜನಿಕ ಆಸ್ಪತ್ರೆಗಳಾಗಿ ಪರಿವರ್ತಿಸಲು ಸರ್ಕಾರಿ ಸುತ್ತೋಲೆಗಳನ್ವಯ ಇರುವ ಮಾನದಂಡ/ನಿಯಮಗಳೇನು;

ಆ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ಅಥವಾ ಸ್ಥಳಾಂತರದ ಬಗ್ಗೆ ಪ್ರಸ್ತಾವನೇಯು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ; ವಿವರ ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):